International Journal of Kannada Research 2022; 8(3): 15-18

International Journal of Kannada Research
www.kannadajournal.com

ISSN: 2454–5813
IJKR 2022; 8(3): 15-18
© 2022 IJKR
www.kannadajournal.com
Received: 19-05-2022
Accepted: 21-06-2022

**ಕು. ಮಣೂರ ಸುಧಾರಾಣಿ ಶಿವಪಾ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ, ಕರ್ನಾಟಕ,
ಭಾರತ

Corresponding Author:
**ಕು. ಮಣೂರ ಸುಧಾರಾಣಿ ಶಿವಪಾ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ, ಕರ್ನಾಟಕ,
ಭಾರತ

# ಕನ್ನಡ ಮಕ್ಕಳ ಪತ್ರಿಕೆಗಳು : ಒಂದು ಪಕ್ಷಿ ನೋಟ

**ಕು. ಮಣೂರ ಸುಧಾರಾಣಿ ಶಿವಪಾ**

ನಮ್ಮ ಸಮಾಜದಲ್ಲಿ ಅತ್ಯಂತ ಅಲಕ್ಷ್ಯಕ್ಕೆ ಒಳಗಾದವರೆಂದರೆ ಮಕ್ಕಳು. ಮಕ್ಕಳು ಅಲಕ್ಷ್ಯಕ್ಕೆ ಒಳಗಾಗಿರುವುದರಿಂದ ಮಕ್ಕಳ ಸಾಹಿತ್ಯವೂ ಅಲಕ್ಷಿತವಾಗಿದೆ! ಹಾಗೆ ಮಕ್ಕಳ ಪತ್ರಿಕೆಗಳ ಬಗೆಗೆ, ಪತ್ರಿಕೆಗಳಲ್ಲಿ ಮಕ್ಕಳ ಬಗೆಗೆ ನಮ್ಮ ಗಮನ ಕೂಡ ಕಡಿಮೆ ಇದೆ. ನಮ್ಮಲ್ಲಿ ಮಕ್ಕಳ ಪತ್ರಿಕೋದ್ಯಮ ಎನ್ನುವಂಥ ವಿಚಾರವೇ ಇನ್ನೂ ಜಾಗೃತಗೊಂಡಿಲ್ಲ ಎಂದರೆ ತಪ್ಪಾಗಲಾರದು. ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಮಕ್ಕಳ ಪತ್ರಿಕೆಗಳು ಐತಿಹಾಸಿಕ ಗಣನೀಯ ಪಾತ್ರವನ್ನು ವಹಿಸಿಕೊಂಡು ಬಂದಿವೆ. ಮೊದಮೊದಲು ನೀತಿಕಥೆಗಳನ್ನು ಹೇಳುವುದೇ ಮಕ್ಕಳ ಪತ್ರಿಕೋದ್ಯಮದ ಮೂಲ ಉದ್ದೇಶವಾಗಿತ್ತು. ಈಗ ಜ್ಞಾನ ಸಂವಹನ ಹಾಗೂ ಮನೋರಂಜನೆಗಳು ಆ ಸ್ಥಳವನ್ನು ಆಕ್ರಮಿಸಿಕೊಂಡಿವೆ. ಕೀಳು ಮಟ್ಟದ ಮನೋರಂಜನೆಯೂ ಮಕ್ಕಳ ಸಾಹಿತ್ಯದ ಹೆಸರಿನಲ್ಲಿ ವಕ್ಕರಿಸಿದೆ. ಈಗ ಜಾಗತಿಕ ಮಟ್ಟದಲ್ಲಿ ಮಕ್ಕಳ ವ್ಯಕ್ತಿತ್ವಕ್ಕೆ ಹಾನಿ ಎಸಗುವ ಪತ್ರಿಕೆಗಳೂ ಹಲವಾರಿವೆ. ಕನ್ನಡದ ಮಟ್ಟಿಗೆ ಪರಿಸ್ಥಿತಿ ಅಷ್ಟು ಹದಗೆಟ್ಟಿಲ್ಲ. ಮಕ್ಕಳ ಸಾಹಿತ್ಯ ಪ್ರಕಾಶನದಲ್ಲಿ ಪಾಲ್ಗೊಂಡು ಅವುಗಳ ಬೆಳವಣಿಗೆ ; ಪ್ರಚಾರಕ್ಕೆ ಮತ್ತು ಜನಪ್ರೀಯತೆಗೆ ಕಾರಣವಾದ ಮಾಧ್ಯಮಗಳಲ್ಲಿ ಆಗಾಗ ಪ್ರಕಟಗೊಳ್ಳುತ್ತಾ ಬಂದ ಪತ್ರಿಕೆಗಳ ಪಾತ್ರ ಬಹಳ ಮಹತ್ವದ್ದಾಗಿದೆ. ಎಲ್ಲ ಭಾಷೆಗಳಿದ್ದಂತೆ ಕನ್ನಡದಲ್ಲೂ ಎಲ್ಲಕ್ಕಿಂತಲೂ ಹೆಚ್ಚಾಗಿ ಮಕ್ಕಳ ಸಾಹಿತ್ಯ ಪ್ರಕಾರವನ್ನು ಹಲವಾರು ಪತ್ರಿಕೆಗಳು ವಿಸ್ತರಿಸುತ್ತಾ ಬಂದಿವೆ. ಅಂತಹ ಕೆಲವು ಪತ್ರಿಕೆಗಳು ಮಕ್ಕಳ ಸಾಹಿತ್ಯಕ್ಕಾಗಿಯೇ ಮೀಸಲಾಗಿವೆ.

ಮಕ್ಕಳ ಕಲ್ಪನಾಶಕ್ತಿಯನ್ನು, ಜ್ಞಾನ, ಅನುಭವಗಳನ್ನು ವಿಸ್ತರಿಸುವ, ಅವರ ಮನಸ್ಸನ್ನು ಅರಳಿಸುವ ನಿಟ್ಟಿನಲ್ಲಿ, ರಂಜನೆ, ಮಾಹಿತಿ, ಶಿಕ್ಷಣ, ಸಮಸ್ಯೆಗಳ ಅರಿವಿನ ವಿಸ್ತರಣೆ ಮತ್ತು ಸಂತೋಷದ ಸಮಯಕಂಡುಕೊಳ್ಳುವಲ್ಲಿ ಪತ್ರಿಕೆ ಅತ್ಯಂತ ಅನಿವಾರ್ಯವಾದದ್ದು.

ಪಶ್ಚಿಮದಲ್ಲಿ 'ಮಕ್ಕಳ ಸಾಹಿತ್ಯ' ಎಂಬ ಪ್ರಕಾರ ಆರಂಭವಾಗಿದ್ದು ೧೫ನೇ ಶತಮಾನದಲ್ಲಿ. ಆದರೆ ಮಕ್ಕಳಿಗಾಗಿ ಪತ್ರಿಕೆಗಳನ್ನು ಆರಂಭಿಸಿದ ಶ್ರೇಯ ಪಶ್ಚಿಮಕ್ಕೆ ಸಲ್ಲುತ್ತದೆ. ಮಕ್ಕಳಿಗಾಗಿ ಪ್ರಕಟವಾದ ಮೊದಲ ಇಂಗ್ಲೀಷ ನಿಯತಕಾಲಿಕ 'ದಿ ಲಿಲಿಪುಟಿಯನ್ ಮ್ಯಾಗಜಿನ್'. ೧೭೫೧ ರಲ್ಲಿ ಆರಂಭವಾದ ಇದು ಒಂದು ವರ್ಷ ನಡೆಯಿತು. ಅನಂತರ ೧೭೮೮ರಲ್ಲಿ 'ದಿ ಜುವೆನೈಲ್ ಮ್ಯಾಗಜಿನ್' ಹೊರಬಂತು. ಇದೂ ಸಹ ಒಂದು ವರ್ಷ ನಡೆಯಿತು. ಅದನ್ನೇ ಸ್ವಲ್ಪ ಮಾರ್ಪಡಿಸಿ, 'ಚಿಲ್ಡ್ರನ್ಸ್ ಮ್ಯಾಗಜೀನ್' ಎಂಬ ಹೆಸರಿನಲ್ಲಿ ಅಮೇರಿಕಾದಲ್ಲಿ ಮರುಮುದ್ರಿಸಲಾಯಿತು. ಕನ್ನಡದ ವಿಷಯಕ್ಕೆ ಬಂದರೆ ದೊಡ್ಡವರ ಪತ್ರಿಕೆ ರೂಪುಗೊಂಡ ಅನೇಕ ದಶಕಗಳ ನಂತರ ಮಕ್ಕಳ ಮಾಧ್ಯಮ ಸಾಧ್ಯತೆಯ ಬಗ್ಗೆ ಹಿರಿಯರು ಯೋಚಿಸಿದರು. ಬ್ರಿಟೀಷರ ಪ್ರಭಾವದಿಂದ, ಕ್ರಿಶ್ಚಿಯನ್ ಮಿಷನರಿಗಳ ಆಗಮನದಿಂದ ೧೯ನೇ ಶತಮಾನದ ಕೊನೆಯಲ್ಲಿ ಹಾಗೂ ೨೦ನೇ ಶತಮಾನದ ಪ್ರಾರಂಭದಲ್ಲಿ ದೇಶದ ಹಲವಾರು ಭಾಗಗಳಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಮಕ್ಕಳ ಪತ್ರಿಕೆಗಳು ಪ್ರಾರಂಭವಾಗಿದ್ದಕ್ಕೆ ನಮಗೆ ದಾಖಲೆಗಳು ಸಿಗುತ್ತವೆ.

ಮೊದಲ ಹಂತದಲ್ಲಿ ಮಕ್ಕಳ ಪತ್ರಿಕೆಗಳು, ಮಕ್ಕಳಿಗೆ ಅಗತ್ಯವಾದುದನ್ನು ಹಿರಿಯರೇ ಗುರುತಿಸಿ, ತಮ್ಮ ಕಲ್ಪನೆಯಲ್ಲಿ ರೂಪಿಸಿದಂತಹುದೇ ಆಗಿತ್ತು. ಅದರಲ್ಲಿ ಮಕ್ಕಳಿಗೆ ತೋರಿಸಬೇಕಾದ ಅಕ್ಕರೆ, ಆಸಕ್ತಿ, ಅವರ ಬಾಲ್ಯದ ತುಂಟಾಟ, ಆರೋಗ್ಯ ಅವರ ಭವಿಷ್ಯವನ್ನು ಸರಿಯಾಗಿ ರೂಪಿಸಲು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕುರಿತು ಹಿರಿಯರಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಮಾಹಿತಿಗಳೇ ಮಕ್ಕಳಿಗಾಗಿ ಪತ್ರಿಕೆಯನ್ನು ಮೊದಲು ಪ್ರಾರಂಭಿಸಿದರು ಎಂಬುದು ಗಮನಾರ್ಹವಾದುದು.

ಸುಮಾರು ೧೮೬೫ ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು 'ಮಠಪತ್ರಿಕೆ' ಎಂಬ ಪತ್ರಿಕೆಯನ್ನು ಹೊರತರಲಾರಂಭಿಸಿದರು. ಇದು ಆರಂಭದಲ್ಲಿ ಕಲ್ಲಚ್ಚಿನಿಂದ ಮುದ್ರಣವಾಗುತ್ತಿತ್ತು. ಇದು ಮುಂದೆ 'ಶಾಲಾ ಪತ್ರಿಕೆ' ಎಂದು ಹೆಸರು ಬದಲಾಯಿಸಿಕೊಂಡಿತು. ಮಕ್ಕಳಿಗೆ ಸಂಬಂಧಿಸಿದ ಪ್ರಥಮ ಪತ್ರಿಕೆ ಇದಾಗಿದ್ದು, ಈಗಲೂ ಸಹ ಇದು 'ಜೀವನ ಶಿಕ್ಷಣ' ಎಂಬ ಹೆಸರಿನಲ್ಲಿ ಹೊರಬರುತ್ತಲಿದೆ. ಕ್ರಿ.ಶ.೧೮೮೮ ರಲ್ಲಿ ಮುಂಬಯಿಯಲ್ಲಿ ಕರ್ಕಿ ವೆಂಕಟರಮಣಶಾಸ್ತ್ರಿ ಅವರು 'ಹಿತೋಪದೇಶ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿ ಅದರಲ್ಲಿ ಮಕ್ಕಳಿಗೆಂದೇ 'ವಿವಿಧ ವೃತ್ತಾಂತ ಸಂಗ್ರಹ' ಎಂಬ ವಿಭಾಗ ತೆರೆದರು. ಈ ಹಿತೋಪದೇಶವೇ ಕನ್ನಡದ ಮೊಟ್ಟಮೊದಲ ಮಕ್ಕಳ ಪತ್ರಿಕೆ ಇರಬೇಕೆಂದು ಅಭಿಪ್ರಾಯಪಡಲಾಗಿದೆ. ಹೆಚ್ಚು ಕಡಿಮೆ ಅದೇ ಕಾಲಕ್ಕೆ ಮೈಸೂರಿನಿಂದ 'ಕರ್ನಾಟಕ ವಾಣಿವಿಲಾಸ'ಎಂಬ ಒಂದು ಪತ್ರಿಕೆ ಪ್ರಕಟವಾಗುತ್ತಿತ್ತೆಂದು ಹೇಳಲಾಗಿದೆ. ಸುಮಾರು ೧೮೬೮ ರಲ್ಲಿ ಬಾಸೆಲ್ ಮಿಶನ್ ಹೊರಡಿಸುತ್ತಿದ್ದ 'ಸಭಾಪತ್ರ' ಪತ್ರಿಕೆಯಲ್ಲಿ ಮಕ್ಕಳಿಗಾಗಿ 'ಬಾಲಪತ್ರ' ಎಂಬ ವಿಶೇಷ ವಿಭಾಗ ಪ್ರಕಟವಾಗುತ್ತಿತ್ತು. ಮುಂದೆ ಸುಮಾರು ೧೮೯೦ ರಲ್ಲಿ ಎಂ.ಶಾಮರಾಯರು ಹೊರತಂದ 'ವಿದ್ಯಾದಾಯಿನಿ' ಪತ್ರಿಕೆಯು ಮಕ್ಕಳಿಗಾಗಿಯೇ ಅನೇಕ ಅಂಕಣಗಳನ್ನು ಪ್ರಕಟಿಸುತ್ತಿತ್ತು. ೧೮೮೦ ರಲ್ಲಿ ಕಂಬಿ ಬಸವಾರ್ಯರು 'ಪ್ರಭಾತ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿ ಮಕ್ಕಳ ಸಾಹಿತ್ಯಕ್ಕೆ ಆದ್ಯತೆ ನೀಡಿದರು.

೧೯೦೦ ರಲ್ಲಿ ಮಂಗಳೂರಿನಲ್ಲಿ ಪ್ರಾರಂಭವಾದ 'ಸುವಾಸಿನಿ' ಪತ್ರಿಕೆ ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿತು. ಎಂ. ಎಸ್. ಪುಟ್ಟಣ್ಣ ಹಾಗೂ ಎಂ. ವೆಂಕಟಕೃಷ್ಣಯ್ಯನವರು ಜೊತೆ ಸೇರಿ ೧೮೮೪ರಿಂದ ೧೮೯೦ರವರೆಗೆ 'ಹಿತಬೋಧಿನಿ' ಎಂಬ ಪತ್ರಿಕೆಯನ್ನು ನಡೆಸಿದರು. ಬಾಲಕ ಬಾಲಕಿಯರಿಗೆ ಮಾರ್ಗದರ್ಶನ ನೀಡಲೆಂದೇ ನಂಜನಗೂಡು ತಿರುಮಲಾಂಬಾ ಅವರು ೧೯೨೨ ರಲ್ಲಿ 'ಸನ್ಮಾರ್ಗದರ್ಶಿ' ಎಂಬ ಪತ್ರಿಕೆಯನ್ನು ಹೊರತಂದರು. ಕನ್ನಡ ಮಕ್ಕಳ ಸಾಹಿತ್ಯದ ಮೊದಲ ಪತ್ರಿಕೆಗಳಲ್ಲಿ ಒಂದಾದ 'ಮಕ್ಕಳ ಪುಸ್ತಕವು' ಕ್ರಿ.ಶ.೧೯೨೬ ರಲ್ಲಿ ಅಶ್ವತ್ಥನಾರಾಯಣರ ಪ್ರಕಾಶನದಲ್ಲಿ ಪ್ರಕಟವಾಯಿತು. ಇದು ಮೊದಲು ದೇವುಡು ನರಸಿಂಹ ಶಾಸ್ತ್ರಿಗಳು, ಆನಂತರ ಡಿ. ಕೆ. ಭಾರದ್ವಾಜ ಅವರ ಸಂಪಾದಕತ್ವದಲ್ಲಿ ಹೊರಬಂದಿತು. ಇದರಿಂದಲೇ ಸ್ಫೂರ್ತಿ ಹೊಂದಿದ ದೇವುಡು ನರಸಿಂಹ ಶಾಸ್ತ್ರಿಗಳು 'ನಮ್ಮ ಪುಸ್ತಕ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಮಕ್ಕಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಬಂದ ಪ್ರಥಮ ಪತ್ರಿಕೆ ಇದಾಗಿದೆ. ಈ ಪತ್ರಿಕೆ ಸುಮಾರು ಐದು ವರ್ಷಗಳ ಕಾಲ ನಡೆಯಿತು. ನಂತರ ಸುಬೋಧರಾಮರಾಯರು 'ಸುಬೋಧ' ಎಂಬ ಮಕ್ಕಳ ಮಾಸಿಕವನ್ನು ೧೯೨೫ ರಲ್ಲಿ ಪ್ರಾರಂಭಿಸಿದರು. ಅಶ್ವತ್ಥನಾರಾಯಣರು ೧೯೨೬ ರಲ್ಲಿ 'ಮಕ್ಕಳ ಪುಸ್ತಕ' ಎಂಬ ಮಕ್ಕಳ ಪತ್ರಿಕೆಯನ್ನು ಪ್ರಾರಂಭಿಸಿದರು. ಅದನ್ನು ಕೆಲಕಾಲ ಹೊಯ್ಸಳರು ನಡೆಸಿದರು. ಮಂಗಳೂರಿನಿಂದ 'ಬಾಲಚಂದ್ರ' ಎಂಬ ಮಕ್ಕಳ ಮಾಸಿಕವನ್ನು ಉಳ್ಳಾಲ ಮಂಗೇಶರಾಯರು ಪ್ರಕಟಿಸಿದರು. ಬೆಂಗಳೂರಿನಲ್ಲಿ ಮಕ್ಕಳ ಕೂಟ ಸ್ಥಾಪಿಸಿದ ಆರ್. ಕಲ್ಯಾಣಮ್ಮ ಇವರು ಕ್ರಿ.ಶ. ೧೯೩೪ ರಲ್ಲಿ 'ಮಕ್ಕಳ ಬಾವುಟ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ಅನೇಕ ಹಿರಿಯ ಸಾಹಿತಿಗಳು ಇದರಲ್ಲಿ ಮಕ್ಕಳಿಗಾಗಿ ಸೃಜನಶೀಲ ಬರಹಗಳನ್ನು ಬರೆದರು. ಆರ್. ಕಲ್ಯಾಣಮ್ಮನವರು ಪ್ರಕಟಿಸುತ್ತಿದ್ದ 'ಸರಸ್ವತಿ' ಎಂಬ ಪ್ರಥಮ ಮಹಿಳಾ ಪತ್ರಿಕೆಯಲ್ಲಿ ಮಕ್ಕಳಿಗಾಗಿಯೇ ಕೆಲಪುಟಗಳನ್ನು ಮೀಸಲಾಗಿಟ್ಟಿದ್ದರು. ಮೈಸೂರಿನ ಚಿಲ್ಡ್ರನ್ಸ್ ಬುಕ್ ಕೌನ್ಸಿಲ್ 'ಕಂದ' ಎಂಬ ಮಾಸಪತ್ರಿಕೆಯನ್ನು ಹೊರಡಿಸಿತು. ಆದರೆ ಇವೆಲ್ಲ ಕೆಲಕಾಲ ಇದ್ದು ಮುಂದೆ ನಿಂತೇ ಹೋದವು.

ರಾಮದುರ್ಗದಿಂದ ನಾಗಕಲಾಲ್ ಅವರು 'ಚಿಣ್ಣರ ಲೋಕ' ಎಂಬ ಪತ್ರಿಕೆಯನ್ನು ೨ ವರ್ಷಗಳ ಕಾಲ ನಡೆಸಿದರು. ಬೆಂಗಳೂರಿನಿಂದ 'ಚಿಗುರು' ಪತ್ರಿಕೆ ಅಂದವಾಗಿ ಮುದ್ರಣಗೊಂಡು ಒಳ್ಳೆಯ ಮುಖಪುಟದೊಂದಿಗೆ ಕೆಲ ಸಮಯ ಬಂತು. 'ಸಂಧ್ಯಾ' ಎಂಬ ಪತ್ರಿಕೆ ಮಕ್ಕಳ ಸಾಹಿತಿಗಳಾದ ಡಾ. ಆನಂದ್ ವಿ. ಪಾಟೀಲ್ ಹಾಗೂ ಅವರ ಗೆಳೆಯರಿಂದ ಕೆಲವು ವರ್ಷಗಳವರೆಗೆ ಅತ್ಯಂತ ಸೊಗಸಾಗಿ ಬಂತು. ಹಾಗೆ ಭಾರತ ಸಂಸ್ಕೃತಿ ವಿದ್ಯಾಲಯದವರು 'ವಿವೇಕ' ಎಂಬ ಪತ್ರಿಕೆಯನ್ನು ತರುತ್ತಿದ್ದಾರೆ. ಚಳ್ಳಕೆರೆಯ ಯರ್ರಿಸ್ವಾಮಿಯವರು ಕಳೆದ ೧೫ ವರ್ಷಗಳಿಂದ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಮಕ್ಕಳಿಗೆ ತಲುಪಿಸುವುದಕ್ಕಾಗಿಯೇ 'ಪುಟಾಣಿ ವಿಜ್ಞಾನ' ಎಂಬ ಪತ್ರಿಕೆ ತರುತ್ತಿದ್ದಾರೆ.

ಸ್ವಾತಂತ್ರ್ಯಾ ನಂತರ ಮದ್ರಾಸಿನ ಚಕ್ರಪಾಣಿ ನಾಗಿರೆಡ್ಡಿಯವರ ಪ್ರಕಾಶನ ಸಂಸ್ಥೆಯು ಕನ್ನಡದಲ್ಲಿ 'ಚಂದಮಾಮ' ಎನ್ನುವ ಮಾಸಪತ್ರಿಕೆಯನ್ನು ಪ್ರಾರಂಭಿಸಿತು. ಇದು ಸಚಿತ್ರವಾಗಿದ್ದು, ಕಣ್ಮನ ಸೆಳೆಯುವಂತೆ ಬಂದಿತು. ೧೯೫೦ ರಲ್ಲಿ ಬೆಂಗಳೂರಿನ ಜೆ. ಟಿ. ಶ್ರೀಕಂಠಯ್ಯನವರು 'ಬಾಲಬಂಧು' ಎಂಬ ಮಕ್ಕಳ ಮಾಸಪತ್ರಿಕೆಯನ್ನು ಕೆಲಕಾಲ ನಡೆಸಿದರು. ೧೯೫೧ ರಲ್ಲಿ 'ಪಾಪಚ್ಚಿ' ಕುಮಾರ ವೆಂಕಣ್ಣನವರ ಸಂಪಾದಕತ್ವದಲ್ಲಿ ಹೊರಬಂದಿತು. ೧೯೫೩ ರಲ್ಲಿ 'ಪರಿಮಳ' ಎಂಬ ಮಾಸಿಕವು ರಾ. ಮೋ. ವಿಶ್ವಾಮಿತ್ರರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಪ್ರಕಟವಾಗತೊಡಗಿತು. ಡಾ. ಕೆ. ಶಿವರಾಮ ಕಾರಂತರು 'ಬಾಲವನ' ಪತ್ರಿಕೆಯನ್ನು, ಪದ್ಮನಾಭರು 'ವಿಶ್ವಾಮಿತ್ರ'ವನ್ನೂ, ಕೋ. ಶಿ. ಕಾರಂತರು 'ಮಕ್ಕಳ ಪತ್ರಿಕೆ'ಯನ್ನು ಕೆಲಕಾಲ ಹೊರತಂದರು. ಮೇವುಂಡಿ ಮಲ್ಲಾರಿಯವರು 'ಕನ್ನಡದ ಕಂದ' ಪತ್ರಿಕೆಯನ್ನು, ಜೆ. ಎ. ಕವಲಿಯವರು 'ನವನೀತ' ಪತ್ರಿಕೆಯನ್ನು, ಸಿ.ಅಶ್ವತ್ಥನಾರಾಯಣರು 'ನವಜೀವನ' ಎಂಬ ಮಾಸಿಕವನ್ನು ಮಕ್ಕಳಿಗಾಗಿ ಕೆಲಕಾಲ ಪ್ರಕಟಿಸಿದರು. ೧೯೬೯ ರಲ್ಲಿ 'ಮುತ್ತು' ಎಂಬ ಮಕ್ಕಳ ಡೈಜೆಸ್ಟ್ ಹೊರ ಬಂದಿತು. ಕ್ರಿ.ಶ.೧೯೫೫ರ ಸಮಯಕ್ಕೆ ಚಂದಮಾಮ ಮಾದರಿಯ 'ಬಾಲಮಿತ್ರ' ಮಕ್ಕಳ ಮಾಸಿಕ ಪ್ರಾರಂಭವಾಯಿತು. ಕ್ರಿ.ಶ. ೧೯೬೬ ರಲ್ಲಿ ಶ್ರೀನಿವಾಸರ ವಿಜ್ಞಾನ ಪ್ರತಿಷ್ಠಾನ 'ವಿಜ್ಞಾನ ಲೋಕ' ಮಕ್ಕಳ ಮಾಸಿಕ ಪತ್ರಿಕೆಯನ್ನು ಕ್ರಿ.ಶ.೧೯೭೬ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಜನಪ್ರಿಯ ವಿಜ್ಞಾನ ಮಾಸ ಪತ್ರಿಕೆಯನ್ನು ಮಕ್ಕಳಿಗಾಗಿ ಪ್ರಾರಂಭಿಸಿತು. ೧೯೭೭ ರಲ್ಲಿ ಬೆಂಗಳೂರಿನಿಂದ ಎನ್. ಕೃಷ್ಣಮಾಚಾರಿಯವರ ಸಂಪಾದಕತ್ವದಲ್ಲಿ 'ಪುಟಾಣಿ' ಎಂಬ ಮಾಸ ಪತ್ರಿಕೆ ಬೆಳಕು ಕಂಡಿತು. ವಿಜಾಪೂರದಲ್ಲಿ 'ಬಾಲಭಾರತಿ' ಎಂಬ ಮಾಸಿಕವು 'ಸಿಸು' ಸಂಗಮೇಶ ಅವರ ಸಂಪಾದಕತ್ವದಲ್ಲಿ ಬಂದಿತು. ೧೯೮೫ ರಲ್ಲಿ ಬೆಂಗಳೂರಿನಲ್ಲಿ 'ಕಾರಂಜಿ' 'ಪುಟಾಣಿ' ಅಜೇಯ' ಪತ್ರಿಕೆಗಳು ಬಾಬು ಕೃಷ್ಣಮೂರ್ತಿ ಅವರ ಸಂಪಾದಕತ್ವದಲ್ಲಿ 'ಬಾಲ ಮಂಗಳ' ಪತ್ರಿಕೆಯು ೧೯೯೩ ರಲ್ಲಿ ಧಾರವಾಡ ಮಕ್ಕಳ ಮನೆಯಿಂದ ಈಶ್ವರ ಕಮ್ಮಾರ ಅವರ ಸಂಪಾದಕತ್ವದಲ್ಲಿ 'ಮಕ್ಕಳ ಮಂದಿರ', ನಂತರ ರಾಮದುರ್ಗದಿಂದ 'ಚಿಣ್ಣರ ಲೋಕ' ಪ್ರಕಟವಾದವು. ಈ ನಡುವೆ ಅಲ್ಲಲ್ಲಿ 'ಪರಾಗ', 'ತುತ್ತೂರಿ', 'ಚಟಾಕಿ', 'ಕಿಶೋರವಾಣಿ', 'ಗೋಪಿ', ಪತ್ರಿಕೆಗಳು ಬಂದವು. ಮೇಲೆ ಹೇಳಿದ ಪತ್ರಿಕೆಗಳಲ್ಲಿ 'ಚಂದಮಾಮ'ವೊಂದನ್ನು ಹೊರತುಪಡಿಸಿದರೆ ಇವೆಲ್ಲ ಸದ್ಯ ಹೊರಡುತ್ತಿಲ್ಲ. ಹಲವಾರು ಕಾರಣಗಳಿಂದ ನಿಂತು ಹೋಗಿವೆ.

ಶಿವಮೊಗ್ಗದಲ್ಲಿ 'ಮಕ್ಕಳ ಮಂಟಪ' ಎನ್ನುವ ಪತ್ರಿಕೆ ಬರುತ್ತಿದೆ.

ಹಾಗೆ ದಕ್ಷಿಣ ಕನ್ನಡದ ಬಿ.ಸಿ.ರೋಡನಿಂದ ವಾಣಿಯನ್ನುವವರು 'ಸಿಂಫನಿ' ಎನ್ನುವ ಪತ್ರಿಕೆ ನಡೆಸುತ್ತಿದ್ದಾರೆ. ಹೊನ್ನಾವರದ ಸೇಂಟ್ ಇಗ್ನೇಶಿಯಸ್ ಶಿಕ್ಷಣ ಸಂಸ್ಥೆಯಿಂದ ಬರುತ್ತಿರುವ 'ಸಂಜೀವಿನಿ' ಎನ್ನುವ ಪತ್ರಿಕೆ ದಶಕಗಳನ್ನು ದಾಟಿ ಮುಂದುವರೆದಿದ್ದು ಆ ಭಾಗದಲ್ಲಿ ಒಳ್ಳೆಯ ಪ್ರತಿಕ್ರಿಯೆಗಳಿಸಿದೆ. ರಾಣೆ ಬೆನ್ನೂರನಿಂದ ಬರುತ್ತಿರುವ 'ಯಶಸ್ವಿನಿ' ಆದಷ್ಟೂ ಶೈಕ್ಷಣಿಕವಾಗಿ ಕಾಣಿಸಿಕೊಂಡಿದ್ದರೂ ನಿರಂತರವಾಗಿ ಬರುತ್ತಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ನಾಟಕ ಶಿಕ್ಷಕರಾದ ಸಂತೋಷ ಗುಡ್ಡಿಯಂಗಡಿಯವರು ಸ್ವಂತ ಪ್ರಯತ್ನದಿಂದ 'ಅಳ್ಳಿಮರ' ಎಂಬ ಮಕ್ಕಳ ಪತ್ರಿಕೆಯನ್ನು ಪ್ರತಿ ತಿಂಗಳೂ ವಿಶಿಷ್ಟವಾಗಿ ರೂಪಿಸುತ್ತಿದ್ದಾರೆ. ಅವರ ಪ್ರೇರಣೆಯಿಂದಲೇ ಇನ್ನು ಅನೇಕ ಶಿಕ್ಷಕರು ತಮ್ಮ ಪುಟ್ಟ ಪರಿಮಿತಿಯಲ್ಲೇ ಮಕ್ಕಳ ಪತ್ರಿಕೆಗಳನ್ನು ತರುತ್ತಿದ್ದಾರೆ. ಈ ನಿಟ್ಟಿನಲ್ಲಿ ಧಾರವಾಡದ ಶಂಕರ ಹಲಗತ್ತಿಯವರು ತರುತ್ತಿರುವ 'ಗುಬ್ಬಚ್ಚಿಗೂಡು' ಈಗ ಬಹುಷಃ ಕನ್ನಡದಲ್ಲಿ, ಕನ್ನಡದವರ ಪ್ರಯತ್ನವಾಗಿ ಎದ್ದು ಕಾಣುವಂತಿದೆ. ಈಗಾಗಲೇ ೧೦ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮುನ್ನಡೆದಿದೆ.

ಕನ್ನಡದಲ್ಲಿ ಈಗಲೂ ಚಂದಮಾಮ, ತುಂತುರು, ಬಾಲಮಿತ್ರ, ಬಾಲಮಂಗಳ, ಚಂಪಕ ಎಂಬ ಮಕ್ಕಳ ಪತ್ರಿಕೆಗಳು ಪ್ರಕಟವಾಗುತ್ತಿವೆ. ಆದರೆ ಇವು ಅಪ್ಪಟ ಕನ್ನಡದ ಪತ್ರಿಕೆಗಳಲ್ಲ. ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟಗೊಂಡು ಕನ್ನಡದಲ್ಲಿ ಅನುವಾದಗೊಂಡಂತವುಗಳಾಗಿವೆ. ನಿಜವಾಗಿಯೂ ಈ ಕನ್ನಡದ ನೆಲದಲ್ಲಿ ಹುಟ್ಟಿ ಸದ್ಯ ಪ್ರಕಟವಾಗುತ್ತಿರುವ ಮಕ್ಕಳ ಪತ್ರಿಕೆಗಳೆಂದರೆ 'ಬಾಲ ವಿಜ್ಞಾನ' (ಕ್ರಿ.ಶ.೧೯೭೮ ರಿಂದ), 'ಪುಟಾಣಿ ವಿಜ್ಞಾನ' (ಕ್ರಿ.ಶ.೧೯೯೬ ರಿಂದ), 'ಅಮೃತವರ್ಷಿಣಿ' (ಕ್ರಿ.ಶ.೨೦೦೦), 'ಗುಬ್ಬಚ್ಚಿಗೂಡು' (ಕ್ರಿ.ಶ.೨೦೦೦ ರಿಂದ), 'ತುಂತುರು' ಇವೆಲ್ಲ ಈಗಲೂ ನಿರಂತರವಾಗಿ ಪ್ರಕಟವಾಗುತ್ತಿವೆ.

ಹಾಗೇ ಮಕ್ಕಳೇ ನಡೆಸುವ ಪತ್ರಿಕೆಗಳು ನಮ್ಮ ನಡುವೆ ಕೆಲವಿತ್ತು. ತೀರ್ಥ ಹಳ್ಳಿಯ ಮುದ್ದು ನಡೆಸುತ್ತಿದ್ದ 'ಮಂದಾನಿಲ' ಅಲ್ಪಕಾಲದಲ್ಲಿಯೇ ಗಮನಿಸುವಂತಾ ಸಾಧನೆ ಮಾಡಿದೆ. ಹಾಗೇ ಹಾಸನದಲ್ಲಿ ಕೆಲವು ವರ್ಷ ಪ್ರೇರಣಾ ವಿಕಾಸ ವೇದಿಕೆಯ ಕೆಲವು ಮಕ್ಕಳು ಸೇರಿ 'ಪ್ರೇರಣಾ' ಎನ್ನುವ ಪತ್ರಿಕೆ ನಡೆಸುತ್ತಿದ್ದರು. ಸಮಾಜಮುಖಿ ಒಲವುಗಳುಳ್ಳ ದಿಟ್ಟ ಪತ್ರಿಕೆಯಾಗಿ ಇದು ರೂಪುಗೊಂಡಿತ್ತು. ಮಕ್ಕಳಿಗಾಗಿ ಹಿರಿಯರು ಬರೆಯುವುದಕ್ಕೂ ಮಕ್ಕಳೇ ನೇರವಾಗಿ ತಮ್ಮ ಪತ್ರಿಕೆಯನ್ನು ತರುವುದಕ್ಕೂ ಇರುವ ವ್ಯತ್ಯಾಸವನ್ನು ಇದರಿಂದ ಗುರುತಿಸಬಹುದಾಗಿದೆ.

ಈ ಬಗೆಯ ಎಲ್ಲಾ ಪ್ರಯತ್ನಗಳನ್ನು ಗಮನಿಸಿದಾಗ ಸಾಹಿತ್ಯಾಸಕ್ತರೇ ಇಂತ ಪತ್ರಿಕೆಯ ಹಿಂದೆ ಇರುವುದು ಗೋಚರಿಸುತ್ತದೆ. ಆದರೆ ಅವರ ಮುಖ್ಯವಾದ ಸಮಸ್ಯೆ ಎಂದರೆ ಆರ್ಥಿಕ ಸಬಲತೆ ಇಲ್ಲದಿರುವುದು. ಕೇವಲ ಉತ್ಸಾಹ, ಆಸಕ್ತಿಯೇ ಇಲ್ಲಿನ ಬಂಡವಾಳ. ಕೇವಲ ಚಂದಾ ಹಣದ ಮೇಲೆ ಅವಲಂಬಿಸುವ ಇವು ಪತ್ರಿಕೆಯ ಮಾರಾಟ ಜಾಲವನ್ನು ವ್ಯವಸ್ಥಿತವಾಗಿ ತೂಗಿಸಲಾಗದೇ ಅಲ್ಪ ಕಾಲದಲ್ಲಿಯೇ ಕೊನೆಯುಸಿರೆಳೆಯುತ್ತವೆ. ಅಥವಾ ನಷ್ಟದಲ್ಲಾದರೂ ಸರಿ ಪ್ರಯತ್ನವನ್ನು ಕೈಬಿಡಬಾರದೆಂದು ಆಸಕ್ತರು ತಾವೇ ಹಣ ಹಾಕಿ ಆಗುವವರೆಗೂ ಮುಂದುವರೆಸುತ್ತಾರೆ. ಕನ್ನಡದಲ್ಲಿ ಇದುವರೆಗೆ ನಡೆದ ಪ್ರಯತ್ನಗಳೆಲ್ಲಾ ಈ ಬಗೆಯವೇ ಆಗಿವೆ. ಹಾಗೇ ಇವಾವುವೂ ಉದ್ಯಮವಾಗಿ ತಮ್ಮನ್ನು ಗುರುತಿಸಿಕೊಳ್ಳುವಲ್ಲಿ ಮುನ್ನಡೆದಿಲ್ಲ ಎಂಬುದು ಗಮನಾರ್ಹ. ಈ ಎಲ್ಲ ಪತ್ರಿಕೆಗಳಿಗೆ ಹಿನ್ನಲೆಯಾಗಿ ಉದ್ಯಮಿಗಳ ಬೆಂಬಲವಿಲ್ಲದಿರುವುದು ಕನ್ನಡ ಮಕ್ಕಳ ಪತ್ರಿಕೆಗಳು ಸೋಲನುಭವಿಸುತ್ತಿರುವುದಕ್ಕೆ ಮುಖ್ಯ ಕಾರಣವಾಗಿವೆ. ನಮ್ಮ ಯಾವ ಪ್ರತಿಷ್ಠಿತ ಪತ್ರಿಕಾ ಸಂಸ್ಥೆಯವರು ಮಕ್ಕಳ ಪತ್ರಿಕೆಯನ್ನು ಮಾಡುವ ಸಾಹಸಕ್ಕೆ ಹೋಗಲಿಲ್ಲ. ಎಲ್ಲರಿಗೂ ಆಗುವ ಮಾಸಿಕ, ಪಾಕ್ಷಿಕ, ವಾರ ಪತ್ರಿಕೆಗಳು ಮಕ್ಕಳಿಗಾಗಿ ಒಂದಿಷ್ಟು ಪುಟಗಳನ್ನು ಮೀಸಲಿರಿಸಿ ತೃಪ್ತಿ ಕಂಡಿವೆ. ಅಲ್ಲೇ ಕೆಲವರು ಹೊಸತಿಗೆ ತುಡಿದುದು, ಉತ್ಸಾಹ ತೋರಿದುದು ಕಾಣುತ್ತದೆ. ಹಾಗೆ ಇನ್ನಷ್ಟು ಆಸಕ್ತಿಯಿಂದ ಗಂಭೀರ ಪ್ರಯತ್ನ ಮಾಡಿ 'ಪುಟಾಣಿ ವಿಜಯ' ದ ಹೆಸರಲ್ಲಿ ೨ ವರ್ಷಗಳ ಕಾಲ ಮೊದಲಿಗೆ ಮಕ್ಕಳ ಪುರವಣಿ ತಂದವರೆಂದರೆ ವಿಜಯ ಕರ್ನಾಟಕದವರು. ಹಾಗೇ ಸಂಯುಕ್ತ ಕರ್ನಾಟಕದವರು ಮಕ್ಕಳಿಗಾಗಿ ತರುತ್ತಿರುವ 'ಕಿಂದರಿ ಜೋಗಿ' ಪುರವಣಿ ಗಮನಿಸುವಂತಾ ಪ್ರಯತ್ನ ಮಾಡುತ್ತಿದೆ. ಪ್ರಜಾವಾಣಿ ಪತ್ರಿಕೆ ತನ್ನ ರವಿವಾರದ ಸಾಪ್ತಾಹಿಕದಲ್ಲಿ ಮಕ್ಕಳ ಕತೆ, ಕವಿತೆಗಳಿಗೆ ಜಾಗ ಕೊಡುತ್ತಾ ಬಂದಿದೆ. ಇತ್ತೀಚಿನ ವಿಜಯವಾಣಿಯೂ ಮಕ್ಕಳ ಪುಟವನ್ನು ಅನುಸರಿಸಿದೆ. ಇದನ್ನು ಮೀರಿ ಹೊಸ ಪ್ರಯತ್ನಗಳೇನೂ ಪತ್ರಿಕಾ ಮಾಧ್ಯಮದಲ್ಲಿ ಆಗಿಲ್ಲ.

ಇದಕ್ಕೆ ಅಪವಾದವೆನ್ನುವಂತೆ ಕೇವಲ ಉದಯವಾಣಿ ಪತ್ರಿಕಾ ಸಮೂಹದವರು ತರುತ್ತಿರುವ 'ತುಂತುರು' ಒಂದು ಕನ್ನಡದ ಎನಿಸಬಹುದಾದ ಗಟ್ಟಿಯಾದ ಪ್ರಯತ್ನ. ಇದರ ಸಂಪಾದಕರು ಸಂಧ್ಯಾ ಪೈ ಅವರು ಪತ್ರಿಕಾ ರಂಗದ ಅನುಭವ ಸಾಕಷ್ಟಿರುವ, ಆರ್ಥಿಕ ಬೆಂಬಲ ಗಟ್ಟಿಯಾಗಿರುವ ಈ ಸಂಸ್ಥೆಯ ಪ್ರಯತ್ನ, ಸಮರ್ಥ ವಿತರಣಾ ಜಾಲದಿಂದಿಂದಾಗಿ ೧೦ ವರ್ಷಗಳನ್ನು ದಾಟಿ ಮುನ್ನಡೆದಿದೆ. 'ತುಂತುರು' ಬಣ್ಣ ಬಣ್ಣವಾಗಿ ಅಂದವಗಿ ಬರುತ್ತಿದ್ದು, ಕರ್ನಾಟಕದಲ್ಲಿ ಈ ರೀತಿಯ ಬೇರೆ ಮಕ್ಕಳ ಪತ್ರಿಕೆಯ ಸ್ಪರ್ಧೆಯ ಭಯ ಅನುಭವಿಸಿಲ್ಲ. ಈಗ ಮಕ್ಕಳ ಲೋಕದಲ್ಲಿರುವ ಎಲ್ಲಾ ಗಿಮಿಕ್‌ಗಳನ್ನು ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಪಾಕ್ಷಿಕವಾಗಿ ೧೦-೧೨ ರ ವಯಸ್ಸಿನ ಮಕ್ಕಳಿಗಾಗಿ ಅತ್ಯಂತ ಸುಂದರವಾಗಿ ಬರುತ್ತಿರುವುದು ಶ್ಲಾಘನೀಯ ಪ್ರಯತ್ನವಾಗಿದೆ.

ಹಾಗೇ ಕನ್ನಡದ ಮಕ್ಕಳಿಗಾಗಿ ಹೊರರಾಜ್ಯದಿಂದ ಬರುತ್ತಿರುವ ಪತ್ರಿಕೆಗಳು ಅನೇಕವಿವೆ. ಭಾರತದಲ್ಲಿ ಬಹುಶಃ 'ಚಂದಮಾಮ'ದಷ್ಟು ಜನಪ್ರೀಯವಾದ ಮಕ್ಕಳ ಪತ್ರಿಕೆ ಇನ್ನೊಂದಿಲ್ಲ. ಇದು ಕನ್ನಡ ಮಕ್ಕಳ ಮೇಲೆ ಬಹಳ ಪ್ರಭಾವ ಬೀರಿತು. 'ಚಂದಮಾಮ' ಬಹಳ ದೀರ್ಘಕಾಲದಿಂದ ನಡೆದುಕೊಂಡು ಬರುತ್ತಿರುವ ಮಕ್ಕಳ ಮ್ಯಾಗಜೀನ್. ಈಗ ಅದು ೧೩ ಭಾಷೆಗಳಲ್ಲಿ ಪ್ರಕಟವಾಗುತ್ತಿದೆ. ಅದರ ೨ ಲಕ್ಷ ಪ್ರತಿಗಳು ಮಾರಾಟವಾಗುತ್ತಿವೆ ಎನ್ನಲಾಗಿದೆ. 'ಸಂಥಾಲಿ' ಎಂಬ ವನವಾಸಿ ಜನ ಭಾಷೆಯಲ್ಲೂ ಪ್ರಕಟವಾಗುತ್ತಿರುವುದು ಅದರ ವಿಶೇಷ.

೧೯೪೭ ರ ಜುಲೈ ತಿಂಗಳಲ್ಲಿ ತೆಲುಗು ಚಲನಚಿತ್ರ ನಿರ್ಮಾಪಕರಾದ ನಾಗಿರೆಡ್ಡಿ ಹಾಗೂ ಅವರ ಮಿತ್ರ ಚಕ್ರಪಾಣಿ ಎನ್ನುವವರು ಮಕ್ಕಳಿಗಾಗಿ ಆರಂಭಿಸಿದ ಈ ನಿಯತಕಾಲಿಕದ ಪ್ರಕಟಣೆ ಈಗಲೂ ಮುಂದುವರೆದಿದೆ. ೧೯೯೮ ರಲ್ಲಿ ವ್ಯಾವಹಾರಿಕ ವ್ಯಾಜ್ಯಕ್ಕೆ ಸಿಲುಕಿ ಅದರ ಪ್ರಕಟಣೆ ಕೆಲಕಾಲ ಸ್ಥಗಿತಗೊಂಡಿತ್ತು. ನಂತರ ಹೊಸ ಸ್ವರೂಪದಲ್ಲಿ ಪ್ರಕಟಣೆಯನ್ನು ಮುಂದುವರೆಸಲಾಯಿತು. ೨೦೦೭ ರಿಂದ ಜಿಯೋಡೇಸಿಕ್ ಎಂಬ ಹೊಸ ಕಂಪನಿಯ ಒಡೆತನದಲ್ಲಿ ಅದನ್ನು ಹೊರತರಲಾಗುತ್ತಿದೆ. ಈಗಲೂ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಅತ್ಯಂತ ಹಳೆಯ ಮಕ್ಕಳ ಪತ್ರಿಕೆ 'ಚಂದಮಾಮಾ' ಎಂಬುದು ನನ್ನ ಭಾವನೆ.

ದೇಶ ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಮಕ್ಕಳಿಗೆ ಭಾರತೀಯ ಪೌರಾಣಿಕ, ಜನಪದ ಸಾಹಿತ್ಯವನ್ನು, ನೀತಿಕಥೆಗಳನ್ನು ಪರಿಚಯಿಸುವ ಕೆಲಸವನ್ನು 'ಚಂದಮಾಮಾ' ಅದ್ಭುತವಾಗಿ

ಮಾಡಿತು. ಈಗ ವಿಜ್ಞಾನ, ತಂತ್ರಜ್ಞಾನ ಹೀಗೆ ಹೊಸ ಅಗತ್ಯಗಳ ಅನುಸಾರ ಜ್ಞಾನಾಧಾರಿತ ವಾಚನಾ ಸಾಮಗ್ರಿಗಳನ್ನು ಒಂದಿಷ್ಟು ಸೇರಿಸಿ ಅದನ್ನು ವೈವಿಧ್ಯಮಯವಾಗಿಸುವ ಯತ್ನ ನಡೆದಿದೆ. ೨೦೦೮ ರಿಂದ ಈ ಪತ್ರಿಕೆಗೆ ಹೊಸ ಆಯಾಮ ನೀಡಲಾಗಿದೆ. ಭಾಷೆ, ಪ್ರಸ್ತುತಿ, ಚಿತ್ರ, ದೃಶ್ಯ, ಸಂವಹನ, ವಸ್ತು ಎಲ್ಲ ರೀತಿಯಲ್ಲೂ ಹೊಸತನ ಸಾಧಿಸಿದೆ. ಸಮಕಾಲೀನ ಸ್ಪಂದನೆಯ ಕತೆ, ಸಾಹಸ, ಸರಣಿ ಕ್ರೀಡಾ ಸಮಾಚಾರ, ತಾಂತ್ರಿಕ ರಂಗದ ಸುದ್ದಿಗಳು, ವಿಜ್ಞಾನ ಹೀಗೆ ಇವತ್ತಿನ ಮಕ್ಕಳ ನಿರೀಕ್ಷೆಯನ್ನು ಅಚ್ಚರಿಪಡಿಸುವಷ್ಟು ಸಮರ್ಥವಾಗಿ ತುಂಬಿಕೊಡುತ್ತಿದೆ. ಸಂವೇದನಾಶೀಲ ಸಾಮಗ್ರಿ ಹಾಗೂ ಶೈಕ್ಷಣಿಕ ಸಾಮಗ್ರಿ ಎಲ್ಲವನ್ನೂ ನೀಡಲು ಈಗ ಪತ್ರಿಕೆ ಸಜ್ಜಾಗಿದೆ. ಈಗ ಸ್ವಲ್ಪ ದೊಡ್ಡ ಮಕ್ಕಳಿಗಾಗಿಯೇ ಪತ್ರಿಕೆಯನ್ನು ಅಚ್ಚುಕಟ್ಟಾಗಿ ರೂಪಿಸಲಾಗುತ್ತಿದೆ.

ಹಾಗೇ ಹೊರರಾಜ್ಯದಿಂದ ಕನ್ನಡದ ಮಕ್ಕಳಿಗಾಗಿ ಬರುತ್ತಿದ್ದ 'ಬಾಲಮಿತ್ರ', 'ಬೊಂಬೆಮನೆ', 'ಪುಟಾಣಿ' ಮುಂತಾದ ನಿಯತಕಾಲಿಕಗಳು ಈಗ ಉಸಿರು ಕಳೆದುಕೊಂಡಿವೆ. ಆದರೆ ಮೂಲ ಕೇರಳದ ಮಂಗಳಂ ಪಬ್ಲಿಕೇಷನ್ಸ್ ಕನ್ನಡದಲ್ಲಿ 'ಬಾಲಮಂಗಳ' ಮತ್ತು 'ಬಾಲ ಮಂಗಳ ಚಿತ್ರಕಥಾ' ಎಂಬ ಎರಡು ಪಾಕ್ಷಿಕವನ್ನು ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು, ಇತ್ತೀಚಿನ ಕೆಲ ವರ್ಷಗಳಿಂದ ಪುಟಾಣಿ ಮಕ್ಕಳಿಗಾಗಿ 'ಗಿಳಿವಿಂಡು' ಎಂಬ ಮಾಸಿಕವನ್ನು ತರುತ್ತಿದ್ದಾರೆ. ಇದು ವ್ಯಾಪಾರಿ ಉದ್ದೇಶವನ್ನು ಮೀರಿದ ಒಂದು ಒಳ್ಳೆಯ ಪ್ರಯತ್ನ. ಹಾಗೇ 'ಚಂಪಕ' ಕೂಡ ಮಕ್ಕಳಿಗೆ ಇಷ್ಟವಾಗುವ ಒಳ್ಳೆಯ ಪತ್ರಿಕೆ. ಇವೆಲ್ಲ ಕನ್ನಡದ ಕೆಲವು ಪ್ರಸಿದ್ಧ ಮಕ್ಕಳ ಪತ್ರಿಕೆಗಳು. ಈ ಪಟ್ಟಿ ಅಪೂರ್ಣ. ಎಲ್ಲ ನಿಯತಕಾಲಿಕಗಳ ಹೆಸರುಗಳನ್ನು ದಾಖಲಿಸುವುದು ಕಷ್ಟ. ಕೆಲವನ್ನು ಮಾತ್ರ ಹೆಸರಿಸಿದ್ದೇನೆ.

ಈ ಎಲ್ಲಾ ಪತ್ರಿಕೆಗಳನ್ನು ಹಾಗೇ ಗಮನಿಸಿದರೆ ಇವುಗಳಲ್ಲಿನ ಸಾಮಾನ್ಯವಾದ ಸೂತ್ರವನ್ನು ಕಂಡುಕೊಳ್ಳಬಹುದು. ಇವು ಮಕ್ಕಳ ಭಾವನಾತ್ಮಕ ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ಗುರಿಯಾಗಿಟ್ಟುಕೊಂಡು ಸಾಮಾನ್ಯವಾದ ಒಂದಿಷ್ಟು ಫಾರ್ಮುಲಾಗಳನ್ನು ಅನುಸರಿಸುತ್ತಿವೆ. ಕಾಮಿಕ್ಸ್ ಎಲ್ಲ ಮಕ್ಕಳ ಪತ್ರಿಕೆಗಳ ಮುಖ್ಯ ಆಕರ್ಷಣೆ. ಹಾಗೇ ರಂಜನೆ, ಮಾಹಿತಿ, ಶಿಕ್ಷಣವೇ ಇವುಗಳ ಮುಖ್ಯಗುರಿ. ಅದನ್ನು ಹೊರತುಪಡಿಸಿ ಸೃಜನಶೀಲತೆಗೆ ಇಂಬು ಕೊಡುವ ಬರಹಗಳನ್ನೊಳಗೊಂಡಿರುವುದು ಕಡಿಮೆ.

ವಾಸ್ತವವಾಗಿ ಈ ಮೇಲಿನ ಅನೇಕ ಮಕ್ಕಳ ಪತ್ರಿಕೆಗಳು ಕೆಲಕಾಲ ನಡೆದು ಮುಚ್ಚಿಹೋಗಿವೆ. ವಾಣಿಜ್ಯಕ ಮತ್ತು ಇತರೆ ಅನೇಕ ಕಾರಣಗಳಿಗಾಗಿ ಎಷ್ಟೋ ಪತ್ರಿಕೆಗಳು ಮುಚ್ಚಿ ಹೋಗುವುದು ಸಹಜ. ಪಶ್ಚಿಮದಲ್ಲಿ ನೂರಾರು ವರ್ಷಗಳ ಇತಿಹಾಸವಿರುವ ಪ್ರತಿಷ್ಠಿತ ಪತ್ರಿಕೆಗಳೆಷ್ಟೋ ಈಗ ಇತಿಹಾಸ ಸೇರಿವೆ. ಉಳಿದ ಎಷ್ಟೋ ಪತ್ರಿಕೆಗಳು ಬಾಗಿಲು ಹಾಕುವ ಹಂತದಲ್ಲಿವೆ. ಅಥವಾ ಮಾರಾಟವಾಗುತ್ತಿವೆ. ಅದು ಮುಖ್ಯವಾದ ಸಂಗತಿ ಅಲ್ಲ. ಒಂದು ನಿಯತಕಾಲಿಕ ಎಷ್ಟು ಕಾಲ ನಡೆಯಿತು ಎಂಬುದಕ್ಕಿಂತಲೂ, ಅದರ ಉದ್ದೇಶ ಏನು? ಗುಣಮಟ್ಟ ಎಂಥದ್ದು ? ಅದರ ಶೈಕ್ಷಣಿಕ ಹಾಗೂ ನೈತಿಕ ಪ್ರಭಾವ ಎಷ್ಟು ಎಂಬುದೇ ಹೆಚ್ಚು ಗಮನಾರ್ಹ. ಈ ಅಂಶಗಳೇ ಇತಿಹಾಸದಲ್ಲಿ ಅದರ ಸ್ಥಾನವನ್ನು ನಿರ್ಧರಿಸುತ್ತವೆ.

ಈಗ ಪಶ್ಚಿಮದ ಮಕ್ಕಳ ಪತ್ರಿಕೆಗಳಲ್ಲಿ ಬರೀ 'ಮನೋರಂಜನೆ'ಗೇ ಹೆಚ್ಚು ಒತ್ತು ನೀಡಲಾಗುತ್ತಿದೆ. ವಿಶೇಷವಾಗಿ ಕಾಮಿಕ್ಸ್‌ಗಳು ಟಿ.ವಿ ಪ್ರಭಾವಕ್ಕೆ ಒಳಗಾಗಿವೆ. ಹೊಸಕಾಮಿಕ್ ಪಾತ್ರಗಳ ವೇಷ-ಭೂಷಣಗಳು, ಸಂಭಾಷಣೆಗಳು ಮಕ್ಕಳಿಗೆ ತಕ್ಕ ಹಾಗಿಲ್ಲ. ಭಾರತದ ಹಾಗೂ ಪಶ್ಚಿಮ ದೇಶಗಳ ಇಂಗ್ಲೀಷ ಪತ್ರಿಕೆಗಳನ್ನು ನೋಡಿದಾಗ 'ಕಿಂದರಿಜೋಗಿ' ಯಂತಹ ಪುರವಣಿ, ಬಾಲ ವಿಜ್ಞಾನದಂತಹ, ಚಂದಮಾಮಾದಂತಹ ಪತ್ರಿಕೆಗಳು ನಮ್ಮ ಮಕ್ಕಳ ಆಪ್ತಗೆಳೆಯರಂತೆ, ನೆಚ್ಚಿನ ಶಿಕ್ಷಕರಂತೆ ಕಾರ್ಯವೆಸಗುತ್ತಿರುವುದು ಸಂತೋಷದ ವಿಷಯ.

ಮಕ್ಕಳ ಪತ್ರಿಕೆಯ ಆಕಾರ, ಅದರ ದೃಶ್ಯ, ಪ್ರಸ್ತುತಿ, ಅದು ಒಳಗೊಳ್ಳಬಹುದಾದ ವಿಷಯ, ಸಾಮಗ್ರಿ ಎಲ್ಲ ವಿಶೇಷವೂ, ವಿಶಿಷ್ಟವೂ ಆಗಿದ್ದು, ಪತ್ರಿಕಾರಂಗ ಇದಕ್ಕೆ ಪ್ರತ್ಯೇಕವಾಗಿಯೇ ತೊಡಗಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಹಿರಿಯರ ದಿನಪತ್ರಿಕೆಗೆ ನೀಡುವಷ್ಟು ಮಹತ್ವವನ್ನು ಇಂಥಹ ಮಕ್ಕಳ ನಿಯತಕಾಲಿಕಗಳಿಗೆ ನೀಡುವುದಿಲ್ಲ. ಪತ್ರಿಕೋದ್ಯಮದ ಪಠ್ಯದಲ್ಲೂ ಮಕ್ಕಳ ಪತ್ರಿಕೆಯ ಕುರಿತು ವಿಶೇಷ ಅಧ್ಯಾಯಗಳು ಕಾಣುವುದಿಲ್ಲ. ಇದೆಲ್ಲ ಆಗಬೇಕಾದ ಕೆಲಸ.

ಮಕ್ಕಳನ್ನು ಹೇಗೆಲ್ಲಾ ಆಕರ್ಷಕವಾಗಿ ತಲುಪಬೇಕು ? ಮಕ್ಕಳಿಗೆ ಇಂದು ಏನೆಲ್ಲಾ ಅಗತ್ಯವಿದೆ ? ಮಕ್ಕಳಿಗೆ ವಿಭಿನ್ನವೂ, ವಿಶೇಷವೂ ಆದ ಹೊಸತೇನನ್ನು ಕೊಡಬಹುದು ? ಅವಗಣನೆಗೊಳಗಾದ ಮಕ್ಕಳ ಸಮಸ್ಯೆಗಳು ಯಾವುವು ? ಎಂದು ಪ್ರತಿಕ್ಷಣ ತುಡಿಯುವ, ಮಕ್ಕಳ ಲೋಕದ ಪ್ರತಿಯೊಂದನ್ನು ಸೂಕ್ಷ್ಮವಾಗಿ ಅವಲೋಕಿಸುವ, ಅನುಭವಿಸುವ, ಮಕ್ಕಳ ಮನಸ್ಸನ್ನು ಪರಕಾಯ ಪ್ರವೇಶ ಮಾಡಿ ಅರಿತುಕೊಳ್ಳಬಲ್ಲ ವಿಶಿಷ್ಟ ಮನೋಧರ್ಮದವರೇ ಮಕ್ಕಳ ಪತ್ರಿಕೆಗಳನ್ನು ಮಾಡಬೇಕು. ಹಾಗೇ ಒಟ್ಟು ಪತ್ರಿಕಾ ಕ್ಷೇತ್ರದಲ್ಲಿ ಮಕ್ಕಳ ಪತ್ರಿಕಾರಂಗ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಮೂಲಕ ವಿಭಿನ್ನವೂ, ಅನನ್ಯವೂ ಆದುದನ್ನು ಸಾಧಿಸಬೇಕಿದೆ. ಸಮಾಜ ಮಕ್ಕಳ ಜಗತ್ತಿನಡೆಗೆ ಒಂದಿಷ್ಟು ಗಮನ ಕೇಂದ್ರೀಕರಿಸಿದರೆ ಮಕ್ಕಳ ಪತ್ರಿಕಾ ಕ್ಷೇತ್ರದಲ್ಲಿ ಹೊಸಬೆಳಕು ಮೂಡಲು ಸಾಧ್ಯವಿದೆ.

**ಪರಾಮರ್ಶನ ಗ್ರಂಥಗಳು**


೧. ಮಕ್ಕಳ ಸಾಹಿತ್ಯ – ಸಂ. ಡಾ. ಬಸು ಬೇವಿನಗಿಡದ

೨. ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ – ಡಾ.ರಾಜೇಂದ್ರ ಎಸ್.ಗಡಾದ